(52)

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ ರವರು ನಿಯಮ 72ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ:

ವಿಷಯ: ಸನ್ಮಾನ್ಯ ಮುಖ್ಯಮಂತ್ರಿಗಳ ಆದೇಶ ವಿರುದ್ಧವಾಗಿ ಮಾನ್ಯ ಲೋಕಾಯುಕ್ತ ಪ್ರಕರಣವೊಂದರ ತನಿಖೆಯಲ್ಲಿ ಅಪರಾಧ ಸಾಬೀತುಗೊಂಡಿರುವ ಮತ್ತು ಇಲಾಖೆ ವಿಚಾರಣೆ ಎದುರಿಸುತ್ತಿರುವ ನೆಫ್ರೋ-ಯುರಾಲಜಿ ಸಂಸ್ಥೆಯ ಕಳಂಕಿತ ವೈದ್ಯರನ್ನು ವೈದ್ಯಕೀಯ ಶಿಕ್ಷಣ ಇಲಾಖೆಯಡಿ ಬರುವ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ಇದರ ಪ್ರಸ್ತುತ ಬೋರ್ಡ್ ಆಫ್ ಸ್ಟಡೀಸ್-ಸೂಪರ್ ಸ್ಪೆಷಾಲಿಟಿ (ವೈದ್ಯಕೀಯ) ಸದಸ್ಯರನ್ನು ಅಕ್ರಮವಾಗಿ ನೇಮಿಸಿರುವ ಆ ಮೂಲಕ ವಿಶ್ವವಿದ್ಯಾಲಯದಲ್ಲಿ ಅಕ್ರಮ ಪರೀಕ್ಷೆ ಮತ್ತು ನೇಮಕಾತಿ ದಂಧೆಗೆ ಅನುವು ಮಾಡಿರುವುದರ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

ಉತ್ತರ:

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ, 1994ರ ಪ್ರಕರಣ 20 ಮತ್ತು 29ರ ಅನ್ವಯ ಬೋರ್ಡ್ ಆಫ್ ಸ್ಟಡೀಸ್ (Board of Studies – BOS) ಅನ್ನು ಒಂದು ಅಧ್ಯಯನ ಮಂಡಳಿಯಾಗಿ ರಚಿಸಲಾಗಿದ್ದು, ಸಂಬಂಧಿಸಿದ ಪರಿನಿಯಮಗಳ ಪ್ರಕಾರ ಅದರ ಸದಸ್ಯರನ್ನು ನೇಮಿಸಲಾಗುತ್ತದೆ.

ಬೋರ್ಡ್ ಆಫ್ ಸ್ಟಡೀಸ್ (ಸೂಪರ್ ಸ್ಪೆಷಾಲಿಟಿ – ವೈದ್ಯಕೀಯ) ಮಂಡಳಿಯು ಮುಖ್ಯವಾಗಿ ವಿವಿಧ ಸೂಪರ್ ಸ್ಪೆಷಾಲಿಟಿ ಕೋರ್ಸುಗಳ ಪಠ್ಯಕ್ರಮ ರಚನೆ, ಪರಿಷ್ಕರಣೆ ಹಾಗೂ ಶೈಕ್ಷಣಿಕ ಸಲಹೆ ನೀಡುವ ಉದ್ದೇಶಕ್ಕಾಗಿ ರಚಿಸಲಾದ ಅಧ್ಯಯನ ಮಂಡಳಿಯಾಗಿದ್ದು, ಈ ಮಂಡಳಿಗೆ ಯಾವುದೇ ರೀತಿಯ ಪರೀಕ್ಷೆ ನಡೆಸುವ ಅಥವಾ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅಧಿಕಾರ ಇರುವುದಿಲ್ಲ. ಸಾಮಾನ್ಯವಾಗಿ ಈ ಮಂಡಳಿಯ ಸಭೆಗಳು ವರ್ಷಕ್ಕೆ ಎರಡು ಅಥವಾ ಮೂರು ಬಾರಿ ಮಾತ್ರ ನಡೆಯುತ್ತವೆ.

ವಿಶ್ವವಿದ್ಯಾಲಯದ ಅಧಿಸೂಚನೆ ದಿನಾಂಕ: 10.12.2024ರ ಮೂಲಕ ಬೋರ್ಡ್ ಆಫ್ ಸ್ಟಡೀಸ್-ಸೂಪರ್ ಸ್ಪೆಷಾಲಿಟಿ (ವೈದ್ಯಕೀಯ) ಅನ್ನು ರಚಿಸಲಾಗಿದೆ.

ಸದರಿ ಮಂಡಳಿಯಲ್ಲಿ ಡಾ: ಶ್ರೀಧರ.ಸಿ.ಜಿ., ಪ್ರಾಧ್ಯಾಪಕರು ಹಾಗೂ ವಿಭಾಗ ಮುಖ್ಯಸ್ಥರು, ನೆಫ್ರೋಲಾಜಿ ವಿಭಾಗ, ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು ರವರು ಸಹ ಒಬ್ಬ ಸದಸ್ಯರಾಗಿರುತ್ತಾರೆ. ಮಾನ್ಯ ಲೋಕಾಯುಕ್ತರ ದಿನಾಂಕ: 03.03.2025ರ ತನಿಖಾ ವರದಿಯಲ್ಲಿ ಮಾಡಲಾಗಿರುವ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುವುದು ಕಂಡು ಬಂದಿರುವ ಹಿನ್ನೆಲೆಯಲ್ಲಿ, ಡಾ: ಶ್ರೀಧರ.ಸಿ.ಜಿ. ಇವರನ್ನು ಒಳಗೊಂಡಂತೆ ಇತರೆ 05 ವೈದ್ಯರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮ 13ರಡಿ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು ದಿನಾಂಕ: 28.10.2025ರ ಆದೇಶದ ಮೂಲಕ ವಿಚಾರಣಾಧಿಕಾರಿಯನ್ನು ನೇಮಿಸಲಾಗಿದೆ.

ಮುಂದುವರೆದು, ಇಲಾಖಾ ವಿಚಾರಣೆ ಎದುರಿಸುತ್ತಿರುವ ನೆಫ್ರೋ-ಯುರಾಲಜಿ ಸಂಸ್ಥೆಯ ವೈದ್ಯರನ್ನು ಯಾವುದೇ ಪರೀಕ್ಷಾ ಕಾರ್ಯ, ಮೌಲ್ಯಮಾಪನ, ಉತ್ತರಪತ್ರಿಕೆ ಪರಿಶೀಲನೆ ಅಥವಾ ನೇಮಕಾತಿ ಸಂಬಂಧಿತ ಕಾರ್ಯಗಳಿಗೆ ಬಳಸಿಕೊಂಡಿರುವುದಿಲ್ಲ. ಸದರಿ ವೈದ್ಯರ ನೇಮಕವು ಕೇವಲ ಅಧ್ಯಯನ ಮಂಡಳಿ (BOS) ಸದಸ್ಯತ್ವಕ್ಕೆ ಮಾತ್ರ ಸೀಮಿತವಾಗಿದ್ದು, ವಿಶ್ವವಿದ್ಯಾಲಯದಲ್ಲಿ ಅಕ್ರಮ ಪರೀಕ್ಷೆ ಅಥವಾ ನೇಮಕಾತಿ ದಂಧೆಗೆ ಯಾವುದೇ ಅವಕಾಶ ಕಲ್ಪಿಸಿರುವುದಿಲ್ಲ.

ಹೀಗಾಗಿ, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 1994 ಹಾಗೂ ಸಂಬಂಧಿಸಿದ ಪರಿನಿಯಮಗಳ ಅಡಿಯಲ್ಲಿ ಯಾವುದೇ ನಿಯಮ ಉಲ್ಲಂಘನೆ ಸಂಭವಿಸಿರುವುದಿಲ್ಲ ಹಾಗೂ ಯಾವುದೇ ರೀತಿಯ ಪರೀಕ್ಷಾ ಅಕ್ರಮಗಳಿಗೆ ಅವಕಾಶ ನೀಡಲಾಗಿರುವುದಿಲ್ಲ.

ಸಂಖ್ಯೆ: ಎಂಇಡಿ 28 ಆರ್‌ಜಿಯು 2026

(ಡಾ|| ಶರಣಪ್ರಕಾಶ ಆರ್. ಪಾಟೀಲ)
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು